# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

ಸಿ.ಸಿ. ಸಂಖ್ಯೆ 617/2017

ಫಿರ್ಯಾದಿ : ಎಂ ಅರ್ಜುನ್ , ಬಿನ್ ಲೇಟ್ ಮಾದಶೆಟ್ಟಿ , ವಯಸ್ಸು ಸುಮಾರು 39 ವರ್ಷ , ವಾಸಃ ನಂ 165 , ಹೆಮ್ಮರಗಾಲ ಗ್ರಾಮ , ದೊಡ್ಡಕವಲಂದೆ ಹೋಬಳಿ , ನಂಜನಗೂಡು ತಾಲ್ಲೂಕು , ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿ : ಮಹಾದೇವ ಡಿ , ಬಿನ್ ದೊಡ್ಡಮಾದಶೆಟ್ಟಿ , ವಯಸ್ಸು ಸುಮಾರು 35 ವರ್ಷ , ವಾಸಃ ಬನ್ನಿತಾಳಪುರ ಗ್ರಾಮ ಮತ್ತು ಅಂಚೆ , ಕಸಬಾ ಹೋಬಳಿ , ಗುಂಡ್ಲುಪೇಟೆ ತಾಲ್ಲೂಕು , ಚಾಮರಾಜನಗರ ಜಿಲ್ಲೆ .

## ಆಪಾದನೆ

*ಶ್ರೀ ಶಿವಕುಮಾರ್ ಆರ್. ಬಿ.ಎ.ಎಲ್., ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾನು ನಿಮ್ಮ ಮೇಲ್ ದೋಷಾರೋಪಿಸುವುದೇನೆಂದರೆ*

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಚಿರಪರಿಚಯಸ್ಥರಾಗಿದ್ದು , ಸದರಿ ಪರಿಚಯದ ಮುಖೇನ ಆರೋಪಿಯಾದ ನೀವು ನಿಮ್ಮ ಕುಟುಂಬದ ಅವಶ್ಯಕತೆಗಾಗಿ ಕೈಸಾಲವಾಗಿ ದಿಃ 1.4.2016 ರಲ್ಲಿ ಪಿರ್ಯಾದುದಾರರನ್ನು ಭೇಟಿ ಮಾಡಿ 3,00,000/- ರೂ ಗಳನ್ನು ಸಾಲವಾಗಿ ಪಡೆದು ಸದರಿ ಸಾಲದ ಹಣವನ್ನು 6 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತೀರಿ , ಸದರಿ ಸಾಲದ ಹಣವನ್ನು 6 ತಿಂಗಳೊಳಗಾಗಿ ಮರುಪಾವತಿ ಮಾಡದಿದ್ದಾಗ , ಪಿರ್ಯಾದುದಾರರು ಅನೇಕ ವೇಳೆ ನಿಮ್ಮನ್ನು ಭೇಟಿ ಮಾಡಿ ಸದರಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ , ಸದರಿ ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು , ಗುಂಡ್ಲುಪೇಟೆ ಶಾಖೆಯ ಚೆಕ್ ನಂ 410494 ನ್ನು ದಿನಾಂಕಃ 20.10.2016 ಎಂದು ನಮೂದಿಸಿ ರೂ 3,00,000/- ಗಳಿಗೆ ನೀಡಿದ್ದು , ಸದರಿ ಚೆಕ್ಕನ್ನು ಬ್ಯಾಂಕ್ನಲ್ಲಿ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ತಿಳಿಸಿರುತ್ತೀರಿ. ಆರೋಪಿಯಾದ ನೀವು ಕೊಡಲ್ಪಟ್ಟ ಚೆಕ್ಕನ್ನು

Mahadeva. D

ನಗಧಿಕರಿಸಿಕೊಳ್ಳಲು ಫಿರ್ಯಾದುದಾರರು ತಮ್ಮ ಖಾತೆ ಹೊಂದಿರುವ ಸಿಂಡಿಕೇಟ್ ಬ್ಯಾಂಕ್ , ನಂಜನಗೂಡು ಶಾಖೆಯ ಬ್ಯಾಂಕಿಗೆ ಹಾಜರ್ಪಡಿಸಲಾಗಿ ಬ್ಯಾಂಕಿನವರು ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ದಿನಾಂಕ 24.10.2016 ರಂದು ನಗಧಿಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ. ತದನಂತರ ಪಿರ್ಯಾದುದಾರರು ದಿಃ 28.10.2016 ರಂದು ಮೇಲ್ಕಂಡ ವಿಷಯವನ್ನು ನಮೂದಿಸಿ ನಿಮಗೆ 15 ದಿನಗಳ ಕಾಲಾವಕಾಶ ನೀಡಿ ವಕೀಲರ ಮೂಲಕ ನಿಮಗೆ ನೋಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದು , ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೆಗೋಷಿಯಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ -1 ಈಗ ಓದಿ ಹೇಳಿದ ನಿಮ್ಮ ಮೇಲಿನ ಅಪಾದನೆಯನ್ನು ಕೇಳಿದ್ದೀರಾ?

ಉತ್ತರ ಕೇಳಿದ್ದೇನೆ

ಪ್ರಶ್ನೆ -2 ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥಾ ವಿಚಾರಣೆಯಗಬೇಕೋ?

ಉತ್ತರ ತಪ್ಪು ಮಾಡಿಲ್ಲ, ವಿಚಾರಣೆ ಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕಃ 24.4.2018 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ)

24/4/18

2 ನೇ ಹೆ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು

Mahadeva D.